ಕೂಡ ನಾಗರೀಕರ ಹಕ್ಕು ಬೇರೆಯವರಿಗೆ ಕಿರುಕುಳ ಆಗದಂತೆ ಕಡಿವೆ ಧ್ವನಿಯಲ್ಲಿ ಪ್ರಾರ್ಥನೆ ಮಾಡಿದರೆ ಒಳ್ಳೆಯದು.

ಶ್ರೀ ಎ. ಎಂ. ಹಿಂಡಸ್ಗೇರಿ.— ಮುಂಜಾನೆ ಐದೂವರೆ ಗಂಟೆಗೆ ಅಜಾನ್ ಕೊಡುತ್ತಾರೆ. ಅದು ಒಂದು ನಿಮಿಷದಲ್ಲಿ ಎಂಡ್ ಆಗುತ್ತದೆ. ಒಂದು ನಿಮಿಷದಲ್ಲಿ ಈ ಸ್ಲೋಗನ್‌ನಿಂದ ಜನರಿಗೆ ಕರೆಯುತ್ತಾರೆ. ಎಲೆಕ್ಷನ್ ಪ್ರಚಾರ, ಸಿನಿಮಾ ಪ್ರಚಾರದಂತೆ ಅರ್ಧ ತಾಸಿನವರೆಗೆ ಮಾಡುವುದಿಲ್ಲ. ಒಂದು ನಿಮಿಷದಲ್ಲಿ ಅಜಾನ್ ಕೊಡುತ್ತಾರೆ, ಅದಕ್ಕೆ ಂತಲೂ ಜಾಸ್ತಿ ಸಮಯ ಉಪಯೋಗ ಮಾಡುವುದಿಲ್ಲ.

ಶ್ರೀ ಎಸ್. ಆರ್ ಬೊಮ್ಮಾಯಿ.— ಪೋಲೀಸ್ ಕಾಯ್ದೆ ಪ್ರಕಾರ ಬೆಳಗಿನ ೬ ಗಂಟೆ ಇದೆ. ಕೇಂದ್ರದ ಕಾನೂನು ತಿದ್ದುಪಡಿಯಾಗುವವರೆಗೂ ಕಾನೂನು ಉಲ್ಲಂಘನೆ ಮಾಡುವುದು ಸರಿಯಲ್ಲ. ಬೇರೆಯವರಿಗೆ ತೊಂದರೆಯಾಗದಂತೆ ಕಡಿವೆ ಧ್ವನಿಯಲ್ಲಿ ಮಾಡಿ ಎಂದು ಹೇಳುತ್ತೇನೆ.

ಬೀದರ್‌ನಲ್ಲಿ ನಡೆದ ಗಲಭೆಗಳಿಂದ ಉಂಟಾದ ಹಾನಿಯ ಬಗ್ಗೆ

೪೦೭೨. **ಶ್ರೀ ಮೊಹಮ್ಮದ್ ಲೈಕುದ್ದೀನ್ (ಬೀದರ್)** —ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೀದರಿನಲ್ಲಿ ೧೪ ರಿಂದ ೧೬ನೇ ಸೆಪ್ಟೆಂಬರ್ ೧೯೮೮ರ ವರೆಗೆ ನಡೆದ ಗಲಭೆಯಲ್ಲಿ ಒಟ್ಟು ಆಸ್ತಿ ಪಾಸ್ತಿಗೆ ಮತ್ತು ಜೀವಕ್ಕೆ ಸಂಭವಿಸಿದ ಹಾನಿಯೆಷ್ಟು ?

(ಆ) ಮೃತಪಟ್ಟವರ – ಗಾಯಗೊಂಡವರ ಹಾಗೂ ಸುಡಲ್ಪಟ್ಟ ಅಥವಾ ಹಾನಿಗೀಡಾದ ಮನೆಗಳ ಮತ್ತು ಅಂಗಡಿಗಳ ಸಂಖ್ಯೆ ಎಷ್ಟು ?

(ಇ) ಗಲಭೆಯಲ್ಲಿ ಬಂಧಿಸಿದ ವ್ಯಕ್ತಿಗಳ ಸಂಖ್ಯೆ, ಪೋಲೀಸರು ದಾಖಲು ಮಾಡಿದ ಮೊಕದ್ದಮೆಗಳ ಸಂಖ್ಯೆ ಎಷ್ಟು ?

(ಈ) ಹಾನಿಗೊಳಗಾದ ಸಂತ್ರಸ್ತರ ಮತ್ತು ಮೃತರ ಕುಟುಂಬಕ್ಕೆ ಸರ್ಕಾರವು ಒದಗಿಸಿದ ಪರಿಹಾರದ ಮೊತ್ತವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

(ಅ)	೧	ಸತ್ತವರು ...	೬ ಮಂದಿ
	೨	ಲೂಟಿಯಿಂದ ಆದ ಆಸ್ತಿ ಪಾಸ್ತಿ ಹಾನಿ ...	೫೨.೦೦ ಲಕ್ಷ ರೂ.
(ಆ)	೧	ಮೃತರು ...	೬ ಮಂದಿ
	೨	ಗಾಯಗೊಂಡವರು (೩೫ ವಿದ್ಯಾರ್ಥಿಗಳು) ...	೪೪ ಮಂದಿ
	೩	ಇತರರು ...	೧೬ ಮಂದಿ
	೪	ಸುಡಲ್ಪಟ್ಟ ಹಾನಿಗೀಡಾದ ಮನೆಗಳು ...	೮೦
	೫	ಹಾನಿಗೀಡಾದ ಅಂಗಡಿಗಳು ...	೧೦
(ಇ)	೧	ಬಂಧಿಸಲ್ಪಟ್ಟವರು ...	೧೨೬ ಜನ
	೨	ದಾಖಲಾದ ಪ್ರಕರಣಗಳು ...	೮೧

(ಈ) ೬ ಜನ ಮೃತರ ಕುಟುಂಬಕ್ಕೆ ತಲಾ ರೂ. ೨೦,೦೦೦ ರಂತೆ ಮತ್ತು ಗಾಯಗೊಂಡವರಿಗೆ ತಲಾ ರೂ. ೫೦೦ ರಿಂದ ೫,೦೦೦ ವರೆಗೆ ವಿತರಿಸಲು ಒಟ್ಟು ೨.೨೦ ಲಕ್ಷ ರೂ ಪರಿಹಾರವನ್ನು ಮಂಜೂರು ಮಾಡಲಾಗಿದೆ. ಹಾನಿಗೊಳ್ಳಪಟ್ಟ ಹಾಗೂ ಕಳೆದುಕೊಂಡ ಆಸ್ತಿಯ ವಿವರ ಅಂದಾಜು ಮಾಡಿದ ನಂತರ ಪರಿಹಾರವನ್ನು ಕೊಡಲಾಗುವುದು.

ನಾನು ಬೀದರ್‌ನಿಂದ ವರದಿ ಬಂದಿದೆ ಎಂದು ನಿನ್ನೆ ಹೇಳಿದ್ದೇನೆ. ಸುಮಾರು ೫೨ ಲಕ್ಷ ರೂಪಾಯಿಯಷ್ಟು ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ವರದಿ ಬಂದಿದೆ ನಮ್ಮ ನಿಯಮಾವಳಿಗನುಸಾರವಾಗಿ ಎರಡು ಮೂರು ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ. ಅನಂತರ ಅವರಿಗೆ ಹೆಚ್ಚಿನ

ಸಹಾಯ ಬೇಕು. ಅದಕ್ಕಾಗಿ ಬಡ್ಡಿರಹಿತ, ಮತ್ತು ಕಡಿಮೆ ಬಡ್ಡಿಯಲ್ಲಿ ಹಣ ಕೊಡಲಿಕ್ಕೆ ಬ್ಯಾಂಕಿನ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇವೆ. ಇನ್ನು ಅವರು ಮನೆ ಕಟ್ಟಿಕೊಳ್ಳುವುದಕ್ಕೆ ಅವಶ್ಯ ಬಿದ್ದರೆ, ಅರಣ್ಯ ಇಲಾಖೆಯಿಂದ ಉಚಿತವಾಗಿ ಕಟ್ಟಿಗೆ ಕೊಡತಕ್ಕದ್ದು, ಇಂತಹವುಗಳ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಪರಿಹಾರ ಕೊಡುತ್ತೇವೆ.

SRI MOHAMED LIAQUDDIN.—The compensation assessed is only 52 lakhs. As a matter of fact the actual damage which has been caused during arson and loot is more than one and a half lakhs of rupees, The list of persons whose houses have been burnt and damaged is not supplied to me. That list may kindly be furnished. Moreover, as regards the incident which took place on 15-9-1988 the compensation which is going to be paid to the families of the bereaved is not yet announced. How much amount is going to be paid to sikh families whose sons have lost or injured persons is not yet announced, It is also not known whether the ex-gratia amount of Rs. 20 000 has been paid or not. This matter should be expedited. If the amount is not released at this time of grief and if it is paid when there is no necessity then there is no use. I urge that at least one lakh should be paid to the families who have lost their sons and fifty thousand should be paid who have received grivious injuries and twenty five thousand to other injured persons. As regards arrest, in 81 cases only 120 persons have been arrested. Culprits have not been identified. Names have been provided by the complainants in their complaints. Those persons have not been arrested yet. So arrests should be made and real cuiprits should be booked and they should be punished. For all these questions I wouid like to have reply from the Hon'ble Chief Minister.

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾಧಿಕಾರಿಯವರಿಗೆ ೨೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅವರು ಸಂಬಂಧಪಟ್ಟವರನ್ನು ಗುರ್ತಿಸಿ ಪರಿಹಾರಧನವನ್ನು ಕೊಡುತ್ತಾರೆ. ತಾವು ೧ ಲಕ್ಷ ರೂಪಾಯಿ ಕೊಡಬೇಕೆಂದು ಹೇಳಿದ್ದೀರಿ. ೧ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನನಗೂ ಕೂಡ ಮನಸ್ಸಿದೆ. ಆದರೆ ಆರೀತಿ ಕೊಡುವುದಕ್ಕೆ ಕಾನೂನು ಅಡಚಣೆ ಇದೆ. ಬೀದರ್ ಮತ್ತಿತರ ಕಡೆಗಳಲ್ಲಿ ಗಲಭೆ ನಡೆದಿದೆ ಗಲಭೆಗೆ ಸಿಕ್ಕಿ ನೊಂದವರಿಗೆ ಪರಿಹಾರವನ್ನು ಕೊಡುತ್ತಾರೆ. ಅಲ್ಲಿ ಸಿಖ್ಖರು ಸತ್ತಿದ್ದಾರೆ ಜಾಸ್ತಿ ಕೊಡಿ, ಇಲ್ಲಿ ಮುಸಲ್ಮಾನರು ಸತ್ತಿದ್ದಾರೆ ಕಡಿಮೆ ಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ, ಇಂಥಿಂಥ ಘಟನೆಗಳಲ್ಲಿ ನೊಂದವರಿಗೆ ಇಂತಿಷ್ಟು ಪರಿಹಾರವನ್ನು ಕೊಡಬೇಕೆಂದು ನಿಯಮ ಇದೆ. ನಾವು ೧ ನಿಯಮವನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಸರ್ಕಾರದ ನಿಯಮದ ಪ್ರಕಾರ ನಾವು ಕೂಡಲೇ ಪರಿಹಾರವನ್ನು ಕೊಡುತ್ತಿದ್ದೇವೆ. ಫಾರೆಸ್ಟ್ ಇಲಾಖೆಯ ಮುಖಾಂತರ ಏನು ಪರಿಹಾರ ಕೊಡಬೇಕೋ ಅದನ್ನು ಕೊಡುತ್ತಿದ್ದೇವೆ ಅದೇರೀತಿ ಬೇರೆ ಬೇರೆ ಇಲಾಖೆಯ ಮುಖಾಂತರ ಏನೇನು ಪರಿಹಾರವನ್ನು ಕೊಡಬೇಕೋ ಅದನ್ನು ಕೊಡುತ್ತಿದ್ದೇವೆ. ಕೆಲವರನ್ನು ಅರೆಸ್ಟ್ ಮಾಡಿದ್ದೇವೆ, ಕೋರ್ಟಿನ ಮುಂದೆ ಹಾಜರು ಮಾಡಿದ್ದೇವೆ. ಕೋರ್ಟ್‌ನವರು ಕೆಲವರನ್ನು ಬಿಟ್ಟಿದ್ದಾರೆ. ಕೆಲವರನ್ನು ನ್ಯಾಯಾಂಗ ಕಸ್ಟಡಿಗೆ ಕೊಡಲಾಗಿದೆ. ಸಿ.ಓ.ಡಿ. ಯಿಂದ ವಿಚಾರಣೆ ನಡೆಯುತ್ತಿದೆ. ತನಿಖೆ ಮಾಡತಕ್ಕ ಕೆಲಸ ನಡೆಯುತ್ತಿದೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಕಾಂಪೆನ್‌ಸೇಷನ್ ಕೊಡಬೇಕಾದರೆ ಅದಕ್ಕೆ ರೂಲ್ಸ್ ಇದೆ. ಆ ರೂಲ್ಸನ್ನು ನಾವು ಉಲ್ಲಂಘನೆ ಮಾಡಿ ಹೆಚ್ಚಿಗೆ ಕೊಡುವುದಾಗಲಿ, ಕಡಿಮೆ ಮಾಡುವುದಾಗಲಿ ಸಾಧ್ಯವಿಲ್ಲ ಎಂದು

ಹೇಳಿದ್ದಾರೆ. ರೂಲ್ಸ್ ಇರತಕ್ಕದ್ದು ಎಂದರೆ, ಅದು ಎಕ್ಸಿಕ್ಯುಟಿವ್ ಆರ್ಡರ್ ಅದು ಆಕ್ಟ್ ಫಾರಂನಲ್ಲಿ ಲೆಜಿಸ್ಲೇಚರ್‌ನಲ್ಲಿ ಚರ್ಚೆಯಾಗಿ ಪಾಸ್ ಆದುದೇನೂ ಅಲ್ಲ. ಅದು ಎಕ್ಸಿಕ್ಯುಟಿವ್ ಆರ್ಡರ್. That can be amended at any time. ಅದನ್ನು ಯಾವಾಗ ಬೇಕಾದರೂ ತಿದ್ದುಪಡಿ ಮಾಡಬಹುದು. ಅದಕ್ಕೆ ನಮ್ಮ ಪರ್ಮಿಷನ್ ಏನೂ ಬೇಕಾಗಿಲ್ಲ ಅಥವಾ ಈ ಸದನದ ಪರ್ಮಿಷನ್ ಕೂಡ ಬೇಕಾಗಿಲ್ಲ. You can amend the rules and give compensation. ಕಾಂಪೆನ್‌ಸೇಷನ್ ಇಷ್ಟು ಕೊಡಬೇಕೆಂದು ಹಿಂದೆ ಯಾವಾಗಲೋ ಅದು ಫಿಕ್ಸ್ ಮಾಡಿರತಕ್ಕದ್ದು,

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲಂತೆ ಸಾವಿರ ಇದ್ದುದನ್ನು ಈಗ್ಗೆ ೬ ತಿಂಗಳ ಹಿಂದೆ ೨೦ ಸಾವಿರ ರೂಪಾಯಿಗೆ ಏರಿಸಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಿಂದೆ ೧ ರೂಪಾಯಿಯ ಬೆಲೆ ಎಷ್ಟಿತ್ತು? ಈಗ ಅದರ ಬೆಲೆ ಎಷ್ಟಿದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುಯಾವುದಕ್ಕೆ ಎಷ್ಟೆಷ್ಟು ಪರಿಹಾರವನ್ನು ಕೊಡಬೇಕೆಂದು ರೂಲ್ಸ್ ಇದೆ. ಜೀವಕ್ಕೆ ಬೆಲೆಯನ್ನು ಕಟ್ಟುವುದಕ್ಕಾಗುವುದಿಲ್ಲ. ಹಾಗಾದರೆ ಪಂಜಾಬ್‌ನಲ್ಲಿ ಸಾವಿರಾರು ಜನರು ಸತ್ತಿದ್ದಾರೆ. ಅವರ ಜೀವಕ್ಕೆ ೧ ಲಕ್ಷ ರೂಪಾಯಿ ಎಂದು ಬೆಲೆ ಕಟ್ಟಿಕೊಟ್ಟರೆ ಅದು ಸರಿಯಾಗುತ್ತದೆಯೇ?

(ಗೊಂದಲ)

SRI M. MALLIKARJUNA KHARGE.—That is an executive order.

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕದಲ್ಲಿ ಜೀವಕ್ಕೆ ಹೆಚ್ಚಿಗೆ ಬೆಲೆ, ಬೇರೆಕಡೆಯಾದರೆ ಕಡಿಮೆ ಬೆಲೆಯೆ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲಿ ಇರುವುದನ್ನು ಹೇಳಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರಸರ್ಕಾರದವರು ಏನು ಮಾಡುತ್ತಾರೆಂದು ನೋಡಿಕೊಂಡು ಅದನ್ನೇ ನಾವೂ ಮಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ೯೫೪ (೨೮೫)ರ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ನಮಗೆ ಸರ್ಕಾರದ ಅಂಕಿಅಂಶಗಳು ಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಅಲ್ಲಿ ಕುಳಿತುಕೊಂಡು ಕಾನ್‌ಫಿಡೆನ್‌ಷಿಯಲ್ ಆಗಿ ಅಂಕಿಅಂಶಗಳನ್ನು ತೆಗೆದುಕೊಳ್ಳುತ್ತಾರೆ ಆದರೆ ಅವು ನಮಗೆ ಸಿಗುವುದಿಲ್ಲ. ಆ ಅಂಕಿಅಂಶಗಳು ನಮಗೆ ಬೇಕಾಗುತ್ತವೆ. ಅದು ಇಲ್ಲದಿದ್ದರೆ ನಾವು ಇದರ ಮೇಲೆ ಹೇಗೆ ಚರ್ಚೆ ಮಾಡುವುದಕ್ಕಾಗುತ್ತದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದಿಂದ ಕೇಳಿರತಕ್ಕಂಥದ್ದಕ್ಕೂ ಕೂಡ ಅಂಕಿಸಂಖ್ಯೆಗಳನ್ನು ಕೊಡಬೇಕಾಗಿದೆ. ನಾಳೆ ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ.

Sri K. H. PATIL.—The Member has a right to get the statistical data. When you have fixed the particular date for discussion, it is your duty to furnish the relevant data. You have failed to furnish it. It shows inefficiency on the part of the Government.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಎಲ್ಲಾ ವಿವರಗಳನ್ನು ಕಲೆಹಾಕಿದ್ದೇವೆ. ನಾಳೆ ಮೆಮರಂಡಮ್ ಕೊಡುತ್ತೇವೆ. ಅದರ ಬಗ್ಗೆ ಡಿಟೇಲ್ ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಕಾಲ್ ಅಟೆನ್‌ಷನ್ ನೋಟೀಸ್ ಕೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದರ ಬಗ್ಗೆಯೂ ಹೇಳುತ್ತಿದ್ದೇನೆ. ಚರ್ಚೆ ಮಾಡುವುದು ಒಳ್ಳೆಯದು. ಬೇಕಾದರೆ ರೂಲ್ ೬೮ರ ಕೆಳಗೂ ಡಿಸ್‌ಕಸ್ ಮಾಡೋಣ.

ಶ್ರೀ ಕೆ.ಎಚ್. ಪಾಟೀಲ್.—ಹೋದಸಾರಿಯೇ ಈ ಪ್ರಶ್ನೆಯನ್ನು ನಾನು ಕೇಳಿದ್ದುದು; ಇಲ್ಲಿಯವರೆಗೆ ಉತ್ತರ ಬಂದಿಲ್ಲ. ಪತ್ರವನ್ನೂ ಸಹ ಬರೆದಿದ್ದೇವೆ. ತಾವೆ ಉತ್ತರವನ್ನು ಏತಕ್ಕೆ ಕೊಟ್ಟಿಲ್ಲ. The entire staff of the Government is lethargic. You keep them under suspension for some days and then only they will open their eyes.

ಶ್ರೀ ಬಿ.ಎಸ್. ಎಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಇದು ಬೇರೆ ಎಲ್ಲದಕ್ಕಿಂತಲೂ ಬಹಳ ಮಹತ್ತರವಾದ ವಿಷಯ. ಸಾವಿರಾರು ಜನರು ಸಾಯುತ್ತಿದ್ದಾರೆ. ಎಲ್ಲಾ ವಿಷಯಗಳನ್ನು ಬದಿಗೊತ್ತಿ ಇವತ್ತೆ ಈ ವಿಷಯವನ್ನು ತೆಗೆದುಕೊಳ್ಳಬೇಕು. ಇದು ಲಕ್ಷಾಂತರಜನ ರೈತರಿಗೆ ಸಂಬಂಧ ಪಟ್ಟ ವಿಚಾರವಾಗಿರುತ್ತದೆ. ಆದ್ದರಿಂದ ಇದನ್ನು ಮೊದಲು ತೆಗೆದುಕೊಳ್ಳಿ.

(ಏನೂ ಉತ್ತರವಿಲ್ಲ)

ಅಧ್ಯಕ್ಷರು.— ಪ್ರಶ್ನೆ ೬೫೫ (ಸಿರ್ಸಿ)ನ್ನು ಮುಂದಕ್ಕೆ ಹಾಕಲಾಗಿದೆ.

ಸರಕಾರದ ಆದೇಶವಿಲ್ಲದೆ ನಡೆಸಂವ ಸಾರಾಯಿ ಅಂಗಡಿಗಳು.

೬೮೫. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಅಬಕಾರಿ ಕಂಟ್ರಾಕ್ಟ್ ಮಾಡುವವರ ಹೆಸರುಗಳನ್ನು ಒದಗಿಸುವುದು.

ಆ) ಈ ಕಂಟ್ರಾಕ್ಟರುಗಳಿಗೆ ಸಾರಾಯಿ ಮಾರಲು ಒಂದೊಂದು ಜಿಲ್ಲೆಗೆ ಎಷ್ಟೆಷ್ಟು ಅಂಗಡಿಗಳಿವೆ ಎಷ್ಟು ಲೀಟರ್ ಸಾರಾಯಿ ಮಾರಲು ಆದೇಶ ನೀಡಲಾಗಿದೆ.

ಇ) ಈ ಕಂಟ್ರಾಕ್ಟರುಗಳಿಗೆ ಸರಕಾರವು ಸಾರಾಯಿ ಮಾರಲು ನೀಡಿದ ಜಿಲ್ಲಾವಾರು ವಿವರ ಒದಗಿಸುವುದು.

ಈ) ಬೆಂಗಳೂರಿನಲ್ಲಿ ಸಾರಾಯಿ ಮಾರಲು ಪರವಾನಿಗೆ ಇಲ್ಲದೆ ನಡೆಸುತ್ತಿರುವ ಅಂಗಡಿಗಳ ಸಂಖ್ಯೆ ಎಷ್ಟು?

ಉ) ಬೆಂಗಳೂರಿನಲ್ಲಿ ಸಾರಾಯಿ ಕಂಟ್ರಾಕ್ಟರುಗಳಿಂದು ಮನ ಬಂದಂತೆ ಸಾರಾಯಿ ಅಂಗಡಿಗಳನ್ನು ತೆರೆದು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಇಂತಹ ಕಂಟ್ರಾಕ್ಟರುಗಳ ಮೇಲೆ ಸರಕಾರವು ಕ್ರಮ ಕೈಗೊಳ್ಳದೆ ಇರಲು ಕಾರಣವೇನು?

ಶ್ರೀ ಎಸ್. ಆರ್. ಬೊಮ್ಮಾಯಿ. – (ಮುಖ್ಯಮಂತ್ರಿಗಳು)

ಅ) ಮಾಹಿತಿಯನ್ನು ಅನುಬಂಧ ೧ ರಲ್ಲಿ ನೀಡಲಾಗಿದೆ.

ಆ) ಸಾರಾಯಿ ಅಂಗಡಿಗಳ ಪಟ್ಟಿಯನ್ನು ಅನುಬಂಧ-೨ ರಲ್ಲಿ ಕೊಟ್ಟಿದೆ. ಪ್ರತಿ ಸಾರಾಯಿ ಅಂಗಡಿಯಲ್ಲಿ ಇಂತಿಷ್ಟೆ ಸಾರಾಯಿ ಮಾಡಬೇಕೆಂಬ ನಿಬಂಧ ವಿರುವುದಿಲ್ಲ.

ಇ) ಮಾಹಿತಿಯನ್ನು ಅನುಬಂಧ-೧ ರಲ್ಲಿ ನೀಡಲಾಗಿದೆ.

ಈ) ಅಂತಹ ಅಂಗಡಿಗಳು ಯಾವುವು ಇಲ್ಲ.

ಉ) ಇಲ್ಲ.

ಊ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.